6

## ನಾಯಿ

ಕಳೆದ ಜನ್ಮದಲ್ಲಿ
ನಾನೊಂದು ಪೆದ್ದು ನಾಯಿಯಾಗಿದ್ದೆ.
ಪ್ರೀತಿಗಾಗಿ ಅರಸಿದೆ
ಕೊನೆಗೆ
ಮನುಷ್ಯನಾಗಿ ಹುಟ್ಟಿದೆ.
ಕಳೆದ ಜನ್ಮದಲ್ಲಿ ನನ್ನ ಮೇಲೆ ಗುರಿಯಿಟ್ಟ ಕಲ್ಲುಗಳೆಲ್ಲ
ಈಗ, ಇಂದು ನನ್ನತ್ತ ತೂರಿ ಬರುತ್ತಿವೆ.

7

## ಹಿಂದಿರುಗಿ ಬರುವಾಗ

ಕಾಪಾಡು ನನ್ನನ್ನು ಚೂರುಚೂರಾಗದಂತೆ
ಓ ನನ್ನ ಹೃದಯವೇ!
ನೀನು ಹತ್ತಿರುವ ಎರಡು ಗಾಲಿಯ ಬಂಡಿಯು
ಸೋತವರು ಮರಳೋ ದಾರಿ.

8

## ಕನಸು

ಸೂರ್ಯ
ಒಂದು ಕಣ್ಣಿನ ಕುಳಿಯ ತುಂಬಿದಾಗ,
ಇನ್ನೊಂದು ಕಣ್ಣ ಕುಳಿಯಲ್ಲಿ
ಮಿಲನದ ಕನಸು ಉಳಿಯುತ್ತದೆ ಚಂದ್ರನಿಗೆ,
ಸುಡು ಮರಳುಗಾಡಿನಲ್ಲಿ
ಬಿಟ್ಟುಬಂದ ತಲೆಬುರುಡೆಯ ಹಾಗೆ.



9

## ಶತ್ರು

ಯಾರೋ ಬಚ್ಚಿಟ್ಟುಕೊಂಡು ಕಾಯುತ್ತಿದ್ದಾರೆ
ಸುತ್ತಿಗೆಯಿಂದ ಜಜ್ಜಿಜಜ್ಜಿ ಕೊಲ್ಲಲು ನನ್ನ.
ಹಿಂದಿರುಗಿ ನೋಡಿದರೆ
ಯಾರ ನೆರಳು ಕೂಡ ಇಲ್ಲ ಇಲ್ಲಿ.

10

## ಸಾಂಗತ್ಯ

ಹಚ್ಚಿರಿ ಇಲ್ಲೊಂದು ಹಣತೆ
ಕತ್ತಲಲ್ಲಿದ್ದೇನೆ ಒಬ್ಬಂಟಿ,
ಕಾಣುವುದೊಂದನು ಮಾತ್ರ ಬಲ್ಲ ಪ್ರತಿಮೆ ನಾನು.

11

## ಹುಂಬ

'ನಾನೊಬ್ಬನೇ ಈ ಲೋಕವಲ್ಲಪ್ಪಾ...' ಎಂದು
ನನ್ನ ಆತ್ಮವನ್ನು ಒಪ್ಪಿಸಲು
ಎಷ್ಟು ಯತ್ನಿಸಿದರೂ
ಸಿಡಿಮಿಡಿಗೊಂಡು ಅಳುತ್ತದೆ ಅದು
ಒಂದೇ ಸಮನೆ,
ಬರಿದೆ ಸುಮ್ಮನೆ.



12

## ಕಾಮ

ನನ್ನ ಕಾಮವು
ತಾಯ ಗರ್ಭಕೆ ಮರಳೋ
ನಿಜದ ಹಂಬಲವೊಂದರ
ನಿರಂತರ ಅಳು.

13

## ದೈವ

ಭಕ್ತಸ್ತೋಮದ ನಡುವೆ ಒಂಟಿ
ದೇವರು,
ದುಃಖಿಸಿದ ಅವನು.
ಕೊನೆಗೆ ಅಸಹಾಯಕನಾಗಿ
ಸೃಷ್ಟಿಸಿಕೊಂಡ ದೈವವನ್ನು.